ಓ ಎಸ್ ನಂ. 189/2019
ಪಿ ಡಬ್ಲ್ಯು 1
ದಿನಾಂಕ 15-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರಃ ಶ್ರೀ ಹೆಚ್ ಟಿ ವಕೀಲರಿಂದಃ

**4.** ನನ್ನ ಅಕ್ಕ ಹೇಮಾರವರ ಮದುವೆ ಯಾವಾಗ ಆಯಿತು ಎಂದರೆ ಸಾಕ್ಷಿ 2000 ನೇ ಇಸವಿಯಲ್ಲಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ ನಂಜುಂಡಾರಾಧ್ಯರವರೇ ಒಡವೆ ವಸ್ತ್ರಗಳನ್ನು ನೀಡಿ 4 ನೇ ಪ್ರತಿವಾದಿಯಾದ ಹೇಮರವರ ವಿವಾಹವನ್ನು ಅಚ್ಚುಕಟ್ಟಾಗಿ ನೆರವೇರಿಸಿರುತ್ತಾರೆ ಎಂದರೆ ಸರಿ. ಸದರಿ ಹೇಮಾರವರು ಅವರ ಗಂಡನ ಜತೆ ವಾಸಿಸುತ್ತಿದ್ದಾರೆ ಎಂದರೆ ಸರಿ. ಸದರಿ ಹೇಮಾರವರು ತನ್ನ ಗಂಡನ ಜತೆ ಮೈಸೂರಿನಲ್ಲಿ ವಾಸಿಸುತ್ತಿದ್ದಾರೆ, ಅವರಿಗೆ ಒಬ್ಬ ಮಗನಿದ್ದು, ಏನು ವಿದ್ಯಾಭ್ಯಾಸ ಮಾಡುತ್ತಿದ್ದಾನೆಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹೇಮಾರವರು ಸುಮಾರು 8-10 ವರ್ಷಗಳಿಂದ ನನ್ನ ಸಂಪರ್ಕದಲ್ಲಿ ಇರುವುದಿಲ್ಲ. ನನ್ನ ವಿವಾಹ 2006 ರಲ್ಲಿ ಆಗಿರುತ್ತದೆ. ನನಗೆ ರುದ್ರಾಕ್ಷಾರಾದ್ಯ ಎಂಬ ಒಬ್ಬನೇ ಮಗನಿದ್ದು, ಅವನು ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ವಿವಾಹವನ್ನು ನನ್ನ ತಂದೆಯವರು ಒಡವೆ ವಸ್ತ್ರ ನೀಡಿ ಸಂಪ್ರದಾಯದಂತೆ ನೇರವೇರಿಸಿರುತ್ತಾರೆ ಎಂದರೆ ಸಾಕ್ಷಿ ಸಾಮಾನ್ಯವಾಗಿ ವಿವಾಹ ಮಾಡಿಕೊಟ್ಟಿರುತ್ತಾರೆ, ಒಡವೆ ರೂಪದಲ್ಲಿ

ಮಾಂಗಲ್ಯ ಸರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮದುವೆಯ ಖರ್ಚನ್ನು ನನ್ನ ತಂದೆಯೇ ಭರಿಸಿರುತ್ತಾರೆ ಎಂದರೆ ಸರಿ.

5. ನಾನು, ನನ್ನ ತಂದೆ, ನನ್ನ ಇತರೇ ಸಹೋದರಿ ಮತ್ತು ಸಹೋದರರು ಸರ್ವೆ ನಂ.131 ರ 5 ಎಕರೆ 14 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತನ್ನು ನನ್ನ ತಂದೆ 2006 ರಲ್ಲಿ ಖರೀದಿಸಿದ್ದರು ಎಂದರೆ ಸರಿ. ನಾನು ಬೆಂಗಳೂರಿನ ಸುಂಕದಕಟ್ಟೆ ಏರೋಹಳ್ಳಿಯಲ್ಲಿ ವಾಸಿಸುತ್ತಿದ್ದೇನೆ. ನನ್ನ ಗಂಡ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ನಾನು ನನ್ನ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದೇನೆ. 2013 ರಲ್ಲಿ ಸರ್ವೆ ನಂ.131 ರ 5 ಎಕರೆ 14 ಗುಂಟೆ ಜಮೀನನ್ನು ಮಾರಾಟ ಮಾಡಿದ ನಂತರದಲ್ಲಿ ಬೆಂಗಳೂರಿನಲ್ಲಿರುವ ನನ್ನ ಮನೆಯನ್ನು ಕಟ್ಟಲಾಗಿದೆ ಎಂದರೆ ಸರಿ. ಸದರಿ ಜಮೀನನ್ನು ಮಾರಾಟ ಮಾಡಿದ ಹಣದಿಂದ ಮತ್ತು ನನ್ನ ತಂದೆಯ ಹಣದಿಂದ ನನಗೆ ಬೆಂಗಳೂರಿನಲ್ಲಿ ನನ್ನ ತಂದೆ ನನಗೆ ಒಂದು ಸೈಟನ್ನು ಕೊಡಿಸಿರುತ್ತಾರೆ ಎಂದರೆ ಸುಳ್ಳು. ಸದರಿ ಸೈಟಿನಲ್ಲಿ ನನ್ನ ತಂದೆಯೇ ಮುಂದೆ ನಿಂತು ಮನೆ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ಮನೆ ಕಟ್ಟುವ ಸಮಯದಲ್ಲಿ ನನ್ನ ತಂದೆ ಇದ್ದರು ಆದರೆ ಆ ಮನೆ ಕಟ್ಟಲು ನಾನು ಹಣವನ್ನು ಲೋನ್ ಪಡೆಯುವ ಮೂಲಕ ಮತ್ತು ನನ್ನ ಗಂಡನ ಆದಾಯದಿಂದ ಭರಿಸಿರುತ್ತೇನೆ ಎಂದು

ನುಡಿಯುತ್ತಾರೆ. ನನ್ನ ತಂದೆ ಆರೋಗ್ಯ ಇಲಾಖೆಯಲ್ಲಿ ಸೂಪರಿನ್ ಟೆನ್ಡೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಅವರು 2006 ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂದೆ ನಿವೃತಿಯಾದ ನಂತರ ನನ್ನ ವಿವಾಹ ಮಾಡಿಸಿರುತ್ತಾರೆ ಎಂದರೆ ಸರಿ.

6. ಪ್ರಸ್ತುತ ನಾನು ನನ್ನ ತಂದೆ ಮನೆಗೆ ಹೋಗಿ ಬರುತ್ತಿದ್ದೇನಾ ಎಂದರೆ ಸಾಕ್ಷಿ ಇಲ್ಲ ಸುಮಾರು 17 ವರ್ಷಗಳಿಂದ ನಾನು ನನ್ನ ತವರು ಮನೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ನನ್ನ ಮನೆಯ ಗೃಹಪ್ರವೇಶಕ್ಕೆ ನನ್ನ ತಂದೆ ತಾಯಿ ಇಬ್ಬರು ಮಾತ್ರ ಬಂದಿದ್ದರು. ದಾವಾ ಐಟಂ ನಂ.1 ರಿಂದ 4 ರ ಆಸ್ತಿಗಳು ಒಬ್ಬಬ್ಬ ಕುಟುಂಬ ಸದಸ್ಯರ ಹೆಸರಿನಲ್ಲಿರುತ್ತವೆ ಎಂದರೆ ಸರಿ. 1996-97 ರ ಸಾಲಿನಲ್ಲಿ ನನ್ನ ಮತ್ತು ನನ್ನ ಅಕ್ಕನಾದ ಹೇಮಾರವರ ಒಪ್ಪಿಗೆ ಮೇರೆಗೆ 1 ರಿಂದ 3 ನೇ ಪ್ರತಿವಾದಿಗಳು ಮೇಲ್ಕಂಡ ದಾವಾ ಐಟಂ ನಂ.1 ರಿಂದ 4 ರ ಸ್ವತ್ತುಗಳನ್ನು ಒಬ್ಬರಿಗೆ ಒಂದರಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ 1996-97 ನೇ ಸಾಲಿನಲ್ಲಿ ನನಗೆ ಸುಮಾರು 8-9 ವರ್ಷ ವಯಸ್ಸಾಗಿತ್ತು ಆ ಸಮಯದಲ್ಲಿ ನನ್ನ ಒಪ್ಪಿಗೆಯನ್ನು ಯಾರು ಸಹ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿ ಪ್ರಸ್ತುತ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನನ್ನ ತಾಯಿ ಮಂಜುಳಾ ಮತ್ತು ನನ್ನ ಅಣ್ಣ ಕುಮಾರ್ ರವರ ಜಂಟಿ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ನನ್ನ ತಾಯಿ ಮತ್ತು ನನ್ನ ಅಣ್ಣನ

ಹೆಸರಿನಲ್ಲಿ ಜಂಟಿ ಖಾತೆ ಇರುವ ವಿಚಾರ ನನಗೆ ಯಾವಾಗ ತಿಳಿದು ಬಂತು ಎಂದರೆ ಸಾಕ್ಷಿ ನಾನು ಎಸ್ ಎಸ್ ಎಲ್ ಸಿ ಯಲ್ಲಿದ್ದಾಗ ಅಂದರೆ 2000 ನೇ ಇಸವಿಯಲ್ಲಿ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನಾನು ಯಾವಾಗ ನೋಡಿರುತ್ತೇನೆ ಎಂದರೆ ಸಾಕ್ಷಿ ಪ್ರಸ್ತುತ ದಾವೆಯನ್ನು ಹೂಡುವ ಸಮಯದಲ್ಲಿ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿ ನನ್ನ ತಾಯಿ ಮತ್ತು ನನ್ನ ಅಣ್ಣನ ಹೆಸರಿಗೆ ಯಾವಾಗ ಜಂಟಿ ಖಾತೆ ಬಂದಿದೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಜಂಟಿ ಖಾತೆ ಬಂದು ಎಷ್ಟು ವರ್ಷಗಳಾಗಿವೆ ಎಂದರೆ ಸಾಕ್ಷಿ ನನಗೆ ಅಂದಾಜಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯ ಚಕ್ಕುಬಂದಿಯನ್ನು ನನಗೆ ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ತಕ್ಕಮಟ್ಟಿಗೆ ಹೇಳಬಹುದು ಆದರೆ ದಾಖಲೆ ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ವಿಸ್ತೀರ್ಣ ಅಂದಾಜು 4 ಎಕರೆ ಇರುತ್ತದೆ. ಸದರಿ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯನ್ನು ನಾನು ಯಾವಾಗ ನೋಡಿರುತ್ತೇನೆ ಎಂದರೆ ಸಾಕ್ಷಿ ಹುಟ್ಟಿದಾಗಿನಿಂದಲೂ ಸಹ ನಾನು ನೋಡಿರುತ್ತೇನೆ. ಇತ್ತೀಚೆಗೆ ದಾವಾ ಆಸ್ತಿಯನ್ನು ಯಾವಾಗ ನೋಡಿರುತ್ತೇನೆ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಹಾಜರಾಗುವ ಸಮಯದಲ್ಲಿ ದಾರಿ ಮಧ್ಯೆ ದಾವಾ ಆಸ್ತಿ ಇದ್ದು ಅದನ್ನು ನಾನು ನೋಡಿಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

7. ದಾವಾ ಐಟಂ ನಂ.2 ರ ಆಸ್ತಿಯ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ 2 ಎಕರೆ 29 ಗುಂಟೆ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸದರಿ ಸ್ವತ್ತು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತಾಗಿದ್ದು ನನ್ನ ಅಜ್ಜನ ಹೆಸರಿನಿಂದ ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ. ನನ್ನ ಅಜ್ಜನ ಮರಣದ ನಂತರ ನನ್ನ ತಂದೆಯ ಹೆಸರಿಗೆ ಸದರಿ ಆಸ್ತಿ ಬಂದಿರುತ್ತದೆ, ಆದರೆ ನಿಖರವಾಗಿ ಯಾವ ವರ್ಷದಲ್ಲಿ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಅಜ್ಜನಾದ ಪಾಪಣ್ಣರವರು 1998-99 ನೇ ಸಾಲಿನಲ್ಲಿ ಮೃತ ಪಟ್ಟಿರುತ್ತಾರೆ. ಸದರಿ ಖಾತೆಯು ಪೌತಿವಾರಸುನೆಲೆಯಲ್ಲಿ ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ. ನಾನು ಮದ್ಯಂತರ ಅರ್ಜಿ ಸಂಖ್ಯೆ ಒಂದನ್ನು ಸಲ್ಲಿಸಿ ಅದರಂತೆ 26,18,491 ರೂ ಹಣವನ್ನು ನ್ಯಾಯಾಕ್ಕೆ ಡಿಪಾಜಿಟ್ ಮಾಡುವಂತೆ ಅರ್ಜಿ ಸಲ್ಲಿಸಿದ್ದು ಸದರಿ ವಿಚಾರ ನನಗೆ ಯಾವ ರೀತಿ ತಿಳಿದುಬಂತು ಎಂದರೆ ಸಾಕ್ಷಿ ಶಿವಮೊಗ್ಗದ ಎಲ್ ಎ ಒ ಕಚೇರಿಯಲ್ಲಿ ಭೂಾ ಸ್ವಾಧೀನ ಪ್ರಕ್ರಿಯೇ ಆಗಿ ಪರಿಹಾರದ ಹಣ ಬಂದಿರುವ ಬಗ್ಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಭೂ ಸ್ವಾಧೀನಗೊಂಡ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಭೂ ಸಾವಧೀನ ಪ್ರಕ್ರಿಯೆಯಿಂದ 26,18,491 ರೂ ಬಂದಿದೆ ಎಂದು ಹೇಳುವುದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ

ಪರಿಹಾರದ ಹಣ ಯಾರಿಗೆ ಬಂದಿದೆ ಎಂದರೆ ಸಾಕ್ಷಿ ನನ್ನ ಅಣ್ಣ ಕುಮಾರ್ ರವರ ಹೆಸರಿಗೆ ಬಂದಿದೆ ಎಂದು ನುಡಿಯುತ್ತಾರೆ.

8. ದಾವಾ ಷೆಡ್ಯೂಲ್ ಐಟಂ ನಂ.8 ರಡಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಿಂದ 11,12,532 ರೂ ಪರಿಹಾರದ ಹಣ ಬಂದಿದೆ ಎಂದು ತಿಳಿಸಿದ್ದು ಆ ವಿಚಾರ ಸರಿ ಇದೆಯಾ ಅಥವಾ ಭೂ ಸ್ವಾಧೀನ ಪ್ರಕ್ರಿಯೆಯಿಂದ ಮೇಲೆ ಹೇಳಿದಂತೆ 26,18,491 ರೂ ಪರಿಹಾರದ ಹಣ ಬಂದಿದೆ ಎಂದು ಹೇಳುವುದು ಸರಿ ಇದೆಯಾ ಎಂದರೆ ಸಾಕ್ಷಿ ಮೇಲ್ಕಂಡ ಎರಡೂ ಮೊತ್ತಗಳು ಬೇರೆ ಬೇರೆ ಸಮಯದಲ್ಲಿ ಭೂ ಸ್ವಾಧೀನ ಗೊಂಡಾಗ ಬಂದಿರುವ ಮೊತ್ತ ಆಗಿರುತ್ತದೆ ಎಂದು ನುಡಿಯುತ್ತಾರೆ. 11,12,532 ರೂ ಹಣ ಯಾವ ಜಮೀನು ಸ್ವಾಧೀನಗೊಂಡ ಬಗ್ಗೆ ಬಂದ ಹಣವಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆಗೆ ಸೇರಿದ ಹಳೆಯ ಅಸೆಸ್ಮೆಂಟ್ ನಂ.37 ರ ಆಸ್ತಿ ಭೂ ಸ್ವಾಧೀನಗೊಂಡ ಬಗ್ಗೆ ಬಂದಿರುವ ಬಂದ ಹಣವಾಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಭೂ ಸ್ವಾಧೀನಗೊಂಡ ಸ್ವತ್ತಿನ ಅಳತೆ ಎಷ್ಟು ಎಂದರೆ ಸಾಕ್ಷಿ ನನಗೆ ನಿಖರವಾಗಿ ಗೊತ್ತಿಲ್ಲ, ದಾಖಲೆ ನೋಡಬೇಕು ಎಂದು ನುಡಿಯುತ್ತಾರೆ. 26,18,491 ರೂ ಪರಿಹಾರದ ಹಣವನ್ನು ಯಾವ ಜಮೀನು ಸ್ವಾಧೀನ ಪಡಿಸಿಕೊಂಡ ಬಗ್ಗೆ ನೀಡಲಾಗಿದೆ ಎಂದರೆ ಸಾಕ್ಷಿ ನನ್ನ ಅಣ್ಣ ಕುಮಾರ್ ರವರ ಹೆಸರಿನಲ್ಲಿರುವ ಸರ್ವೆ ನಂ.171 ರ 24 ಗುಂಟೆ ಜಮೀನು ಎಂದು ನುಡಿಯುತ್ತಾರೆ. 26,18,491 ರೂ ಪರಿಹಾರದ ಹಣವನ್ನು ನನ್ನ

ಅಣ್ಣ ಕುಮಾರ್ ರವರು ಪಡೆದಿರುತ್ತಾರೆ ಎಂಬ ವಿಚಾರವನ್ನು ನನ್ನ ವಾದಪತ್ರದಲ್ಲಿ ಹೇಳಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪರಿಹಾರದ ಹಣವನ್ನು ನನ್ನ ತಂದೆ ಮತ್ತು ನನ್ನ ಅಣ್ಣ ವೈಯಕ್ತಿಕವಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

9. 5 ನೇ ಪ್ರತಿವಾದಿ ರೇಖಾರವರು ನನ್ನ ಅಣ್ಣ ಕುಮಾರ್ ರವರ ಹೆಂಡತಿಯಾಗಿದ್ದು, ನನ್ನ ತಂದೆ ನಂಜುಂಡಾರಾಧ್ಯರವರ ಸೊಸೆಯಾಗಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.4 ರ ಆಸ್ತಿಯು ನನ್ನ ತಂದೆಗೆ ಸಂಬಂದಪಟ್ಟದ್ದಾಗಿದ್ದು ಅವರು 5 ನೇ ಪ್ರತಿವಾದಿಗೆ ಸದರಿ ಸ್ವತ್ತನ್ನು ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿ ಸದರಿ ಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತಾಗಿದ್ದು ಸದರಿ ಸ್ವತ್ತಿನ ಮೂಲ ಅಸೆಸ್ಮೆಂಟ್ ಸಂಖ್ಯೆ 37 ಆಗಿದ್ದು ಅದರಲ್ಲಿ ಮೂರು ಭಾಗಗಳನ್ನು ಮಾಡಿ ಅಂದರೆ ಅಸೆಸ್ಮೆಂಟ್ ಸಂಖ್ಯೆ 37, 27 ಮತ್ತು 28 ಎಂದು ಭಾಗ ಮಾಡಿದ್ದು ಅದರಲ್ಲಿ ಅಸೆಸ್ಮೆಂಟ್ ಸಂಖ್ಯೆ 28 ಆಸ್ತಿಯನ್ನು ನನ್ನ ತಂದೆ ಅವರ ಸೊಸೆ 5 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರ ಮಾಡಿದ್ದು, ಅಸೆಸ್ಮೆಂಟ್ ಸಂಖ್ಯೆ 37 ಮತ್ತು 27 ನನ್ನ ತಂದೆಯ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಹೆಸರಿನಲ್ಲಿರುವ ಆಸ್ತಿಗಳೆಲ್ಲವೂ ಸಹ ಅವರ ವೈಯುಕ್ತಿಕ ಸ್ವತ್ತಾಗಿದ್ದು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸಾಕ್ಷಿ ಆ ಸ್ವತ್ತುಗಳೆಲ್ಲವೂ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳು 1996-97 ರ ಜುಬಾನೆ

ಹಿಸ್ಸೆಯಂತೆ ಪ್ರತಿವಾದಿಗಳ ಹಿಸ್ಸೆಗೆ ಬಂದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸಾಕ್ಷಿ ಮದುವೆಯಾದ ನಂತರದಲ್ಲಿ ನಾನು ಸಾಮಾನ್ಯ ಹೆಣ್ಣು ಮಕ್ಕಳಂತೆ ನಾನು ನನ್ನ ಗಂಡನ ಮನೆಯಲ್ಲಿ ವಾಸಿಸುತ್ತಿದ್ದು, ಒಟ್ಟು ಕುಟುಂಬದಲ್ಲಿ ಮುಂದುವರೆದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಭಾಗದ ರೂಪದಲ್ಲಿ ನನ್ನ ತಂದೆ ನನ್ನ ಮದುವೆಯ ಸಮಯದಲ್ಲಿ ನನಗೆ 1 ಲಕ್ಷ ರೂ ನಗದು, ಚಿನ್ನ ಹಾಗೂ ಒಂದು ಸೈಟನ್ನು ಕೊಡಿಸಿ ಅದರಲ್ಲಿ ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸುವ ಬಗ್ಗೆ ನಾನು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.